ಬ್ರಾಡ್‌ವೇ ರೋಡ್ ಅಪ್ರೋಚಸ್, ಇವುಗಳನ್ನೆಲ್ಲಾ ಮಾಡುತ್ತಿದ್ದಾರೆ. ಅದರ ವಿವರಗಳನ್ನು ತಮಗೆ ಕಳುಹಿಸಿಕೊಡುತ್ತೇನೆ. ಅದನ್ನು ತಾವು ಪ್ರಾರಂಭಿಸಬೇಕು. ಇದರ ಜೊತೆಗೆ ಶಿವಾಜಿನಗರ ಪ್ರದೇಶದಲ್ಲಿ...

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು: ಶಿವಾಜಿನಗರ ಕ್ಷೇತ್ರದಲ್ಲಿ ಮೂರ್ನಾಲ್ಕು ಕೋಟಿ ರೂಪಾಯಿಗಳ ಕೆಲಸ ನಡೆಯುತ್ತಿದೆ. ನೀವು 43 ಲಕ್ಷ ರೂ.ಗಳನ್ನು ಕೊಟ್ಟಿದ್ದೀರಿ. ಇದು ಏನೇನೂ ಸಾಲದು.

ಅಧ್ಯಕ್ಷರು: ನೀವು ಈ ಬಗ್ಗೆ ಕಮಿಶನರ್ ಹತ್ತಿರ ಹೋಗಿ ಡಿಸ್‌ಕಸ್ ಮಾಡಿ.

ಶ್ರೀ ಎಸ್.ಎಂ. ಕೃಷ್ಣ: ನೀವು ಅಲ್ಲಿ ಮೂರ್ನಾಲ್ಕು ಕೋಟಿ ರೂ.ಗಳ ಕೆಲಸ ನಡೆಯುತ್ತಿದೆ ಎಂದು ಹೇಳುತ್ತಿದ್ದೀರಿ. ಆದರೆ ನಾನು ಹೇಳುತ್ತಿರುವುದು ಮಳೆ ಬಿದ್ದಮೇಲೆ 43 ಲಕ್ಷ ರೂಪಾಯಿಗಳ ಹೆಚ್ಚುವರಿ ಕೆಲಸವನ್ನು ತೆಗೆದುಕೊಂಡಿದ್ದಾರೆ ಎಂದು ಏನು ವರದಿ ಇದೆ ಆ ಬಗ್ಗೆ ಹೇಳಿದೆ. ಅದನ್ನು ನಾನು ಕೂಡ ವೆರಿಫೈ ಮಾಡುತ್ತೇನೆ. ನೀವೂ ಕೂಡ ವೆರಿಫೈ ಮಾಡಿಕೊಳ್ಳಬಹುದು. ಇನ್ನು ಶಿವಾಜಿನಗರ ಪ್ರದೇಶದಲ್ಲಿ ಒಂದು ದೊಡ್ಡ ಮೋರಿ ಮೇಲೆ ಈ ಹಿಂದೆ ನಗರಪಾಲಿಕೆಯವರು ಅಂಗಡಿಗಳನ್ನು ಕಟ್ಟಿಸಿ ಅಲ್ಲಿ ಹೂಳು ತೆಗೆಯಲು ಅಡ್ಡಿಯಾಗಿದೆ, ಈಗ ಮೋರಿಯ ಬದಿಯಲ್ಲಿ ಸಮಾನಾಂತರ ಮೋರಿ ನಿರ್ಮಾಣ ಮಾಡುವ ಯೋಜನೆ ತಯಾರು ಮಾಡಿದ್ದಾರೆ. ಇದರಿಂದ ಶಿವಾಜಿನಗರದ ಸುತ್ತಮುತ್ತ ಬ್ರಾಡ್‌ವೇ, ನಾಲಾ ಸ್ಟ್ರೀಟ್ ಸ್ಥಳಗಳಲ್ಲಿ ಈಗ ಚರಂಡಿ ನೀರು ಮನೆಗಳಿಗೆ ಮತ್ತು ಅಂಗಡಿಗಳಿಗೆ ನುಗ್ಗುವ ಪರಿಸ್ಥಿತಿ ಏನಿದೆ ಅದು ಇದನ್ನು ಮಾಡಿದ ಮೇಲೆ ನಿವಾರಣೆಯಾಗುತ್ತದೆ. ಶಿವಾಜಿನಗರದ ಬಸ್ ಸ್ಟಾ ್ಯಂಡ್ ಸುತ್ತಮುತ್ತ ಕಾಂಕ್ರೀಟ್ ರೋಡ್ ಮಾಡಬೇಕು ಎಂದು ಹೇಳಲಾಗಿದೆ. ಈ ಮಳೆಗಾಲ ಮುಗಿದ ಮೇಲೆ ಮಾಡಲಾಗುವುದು ಈಗ ಮಳೆಗಾಲವೇ ಇನ್ನು ಪ್ರಾರಂಭವಾಗಿಲ್ಲವಲ್ಲ. ಆದುದರಿಂದ ಅತಿ ಶೀಘ್ರದಲ್ಲಿಯೇ ಈ ಕಾರ್ಯವನ್ನು ಪ್ರಾರಂಭ ಮಾಡುತ್ತೇವೆ.

ಎ.ಡಿ.ಬಿ. ಯೋಜನಾ ಕಾಮಗಾರಿಗಳು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

3(58) - ಶ್ರೀ ಜೆ.ಡಿ. ನಾಯಕ್, (ಭಟ್ಕಳ) ಮಾನ್ಯ ಕಾನೂನು ಮತ್ತು ಸಂಸದೀಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರು?

ಅ) ಉತ್ತರ ಕನ್ನಡ ಜಿಲ್ಲೆಯ ಭಟ್ಕಳ ತಾಲ್ಲೂಕಿನ ಪುರಸಭೆಗೆ ಎ.ಡಿ.ಬಿ. ಯೋಜನೆ ಮಂಜೂರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಆ) ಕಾಮಗಾರಿ ಮಂಜೂರಾಗಿ ಹಲವು ವರ್ಷ ಕಳೆದರೂ ಕಾಮಗಾರಿ ಚಾಲನೆಗೆ ವಿಳಂಬ ನೀತಿಗೆ ಕಾರಣವೇನು

ಇ) ಎ.ಡಿ.ಬಿ. ಯೋಜನೆ ಕಾಮಗಾರಿ ಯಾವ ಹಂತದಲ್ಲಿದೆ.

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ಸಚಿವರು)

ಅ) ಬಂದಿದೆ.

ಆ) ಈ ಯೋಜನೆ ಕಾಮಗಾರಿಗಳನ್ನು ಪ್ರಾರಂಭಿಸಲು ಎ ಡಿ ಬಿ ಮಾರ್ಗಸೂಚಿಯಂತೆ ಈ ಕೆಳಕಂಡ ಪೂರ್ವ ಸಿದ್ಧತೆಗಳು ಅವಶ್ಯಕವಾಗಿವೆ.

1. ಯೋಜನೆಯನ್ನು ಅನುಷ್ಠಾನಗೊಳಿಸಲು ಯೋಜನೆ ವಿನ್ಯಾಸ ಅಂದಾಜು ತಯಾರಿಸಲು ಮತ್ತು ಕಾಮಗಾರಿ ಉಸ್ತುವಾರಿ ನಡೆಸಲು ಸಮಾಲೋಚಕರನ್ನು ನಿಯಮಿಸುವುದು.

2. ಯೋಜನೆ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಪ್ರತಿ ಪಟ್ಟಣದಲ್ಲಿಯೂ ಕಾರ್ಯಾಗಾರ ನಡೆಸುವುದು.

3. ಯೋಜನೆ ಅನುಷ್ಠಾನದ ಬಗ್ಗೆ ಮತ್ತು ಯೋಜನೆಯ ವಿವಿಧ ಪ್ಯಾಕೇಜ್‌ಗಳ ಬಗ್ಗೆ ಸಂಬಂಧಿಸಿದ ಪುರಸಭೆಗಳ ಅನುಮೋದನೆ ಪಡೆಯುವುದು.

4. ಯೋಜನೆ ಅನುಷ್ಠಾನಕ್ಕೆ ಬೇಕಾದ ಜಮೀನನ್ನು ಅರಣ್ಯ ಮತ್ತು ಕಂದಾಯ ಇಲಾಖೆ ಮತ್ತು ಖಾಸಗಿಯವರಿಂದ ಪಡೆಯುವುದು.

5. ಈ ಯೋಜನೆಯ ಕಾಮಗಾರಿಗಳಿಗೆ ಪರಿಣತ ಗುತ್ತಿಗೆದಾರರ ಪೂರ್ವಾರ್ಹತೆ ಪಟ್ಟಿ ತಯಾರಿಸಿ ಎ ಡಿ ಬಿ ನಿಯಮಾನುಸಾರ ಅನುಮೋದನೆ ಪಡೆಯುವುದು. ಇದಕ್ಕಾಗಿ ಸ್ಥಳೀಯ ಪುರಸಭೆಗಳ: ಸಂಸ್ಥೆಗಳ ಸಂಗಡ ಮಾತುಕತೆ ನಡೆಸುವುದು ಪತ್ರಿಕಾ ಪ್ರಕಟಣೆ ನೀಡುವುದು ಇತ್ಯಾದಿಗಳು ಅಗತ್ಯವಾಗಿದ್ದು ಇದಕ್ಕೆ ಸಾಕಷ್ಟು ಸಮಯ ಬೇಕಾಯಿತು.

ಇ) ಈ ಯೋಜನೆಯಡಿ ಒಟ್ಟು 87 ಪ್ಯಾಕೇಜ್‌ಗಳು ಬರುತ್ತಿದ್ದು ಎಲ್ಲಾ ಪ್ಯಾಕೇಜ್‌ಗಳಲ್ಲಿ ಬರುವ ಕಾಮಗಾರಿಗಳ ಸರ್ವೆ ವಿನ್ಯಾಸ ಮತ್ತು ಅಂದಾಜುಪಟ್ಟಿ ತಯಾರಿಕೆ ಪ್ರಗತಿಯಲ್ಲಿವೆ 14 ಪ್ಯಾಕೇಜ್‌ಗಳ ಅಂದಾಜುಗಳಿಗೆ ಮಂಜೂರಾತಿ ನೀಡಿದ್ದು ಬಿಡ್‌ಗಳನ್ನು ಕರೆದಿದ್ದು ಇವು ಪರಿಶೀಲನೆಯಲ್ಲಿವೆ. ಸಮಾಲೋಚಕರು (ಕನ್ಸ್‌ಲ್‌ಟೆಂಟ್ಸ್) ಯೋಜಿಸಿರುವ ಕಾರ್ಯಕ್ರಮದಂತೆ ಪ್ಯಾಕೇಜ್‌ಗಳನ್ನು ನೀಡಲಾಗುವುದು.

ಶ್ರೀ ಜೆ.ಡಿ. ನಾಯಕ್: ಮಾನ್ಯ ಅಧ್ಯಕ್ಷರೆ, ಭಟ್ಕಳ ಪುರಸಭೆಗೆ ಎ.ಡಿ.ಬಿ. ಕಾಮಗಾರಿ ಯೋಜನೆ ಮಂಜೂರಾಗಿದೆ. ಮಂಜೂರಾಗಿ ಕೆಲವು ವರ್ಷಗಳೇ ಆಗಿದ್ದರೂ ಇನ್ನೂ ಕೂಡ ಕಾಮಗಾರಿ ಪ್ರಾರಂಭವಾಗಿಲ್ಲ. ಇಷ್ಟು ವಿಳಂಬವಾಗಿರುವುದರಿಂದ ಕಾಮಗಾರಿ ಆಗುತ್ತದೋ ಇಲ್ಲವೋ ಎಂಬ ಭಾವನೆ ಜನರಲ್ಲಿ ಮೂಡಿದೆ ನಾನು ಕೇಳುವುದೇನೆಂದರೆ ಕಾಮಗಾರಿ ಯಾವ ಸ್ಟೇಜ್‌ನಲ್ಲಿದೆ, ಯಾವಾಗ ಪ್ರಾರಂಭ ಮಾಡುತ್ತಾರೆ ಮತ್ತು ಇಷ್ಟು ವಿಳಂಬವಾಗಲು ಕಾರಣವೇನು ಎಂಬ ಬಗ್ಗೆ ಕೇಳುತ್ತಿದ್ದೇನೆ.

ಶ್ರೀ ಡಿ.ಬಿ. ಚಂದ್ರೇಗೌಡ: ಮಾನ್ಯ ಅಧ್ಯಕ್ಷರೆ, ಈ ಯೋಜನೆ ಕಾಮಗಾರಿ ತಡವಾಗಿದೆಯೆಂದು ನಾನು ಒಪ್ಪಿಕೊಳ್ಳುತ್ತೇನೆ. ಇದಕ್ಕೆ ಅನೇಕ ಕಾರಣಗಳು ಇವೆ. ಅದು ಮಾನ್ಯ

ಸದಸ್ಯರಿಗೆ ಗೊತ್ತಿರಬೇಕು. ಯೋಜನೆಯನ್ನು ಅನುಷ್ಠಾನಗೊಳಿಸುವುದಕ್ಕೆ ವಿನ್ಯಾಸದ ಅಂದಾಜು ತಯಾರು ಮಾಡತಕ್ಕಂಥದ್ದು ಮತ್ತು ಪೂರ್ವ ಸಿದ್ಧತೆಗಳನ್ನು ಈ ವಿನ್ಯಾಸ ಅಂದಾಜು ಮಾಡುವಾಗ ಮಾಡತಕ್ಕಂಥದ್ದು, ಹಾಗೂ ಪ್ರತಿಯೊಂದು ಪಟ್ಟಣಗಳಲ್ಲೂ ಕಾರ್ಯಾಗಾರಗಳನ್ನು ನಡೆಸಿ ಸಾರ್ವಜನಿಕರಿಗೆ ಈ ಒಂದು ಯೋಜನೆ ಬಗ್ಗೆ ಅರಿವು ಮೂಡಿಸುವುದು, ಇದರ ಜೊತೆಗೆ ಸಂಬಂಧಪಟ್ಟ ಪುರಸಭೆಗಳ ಜೊತೆ ಸಮಾಲೋಚನೆ ಮಾಡಬೇಕು, ಇದರ ಜೊತೆಗೆ ಪುರಸಭೆಗಳು ಕೊಡುವ ಸಲಹೆಯನ್ನು ಮತ್ತೆ ಮರು ಪರಿಶೀಲನೆ ಮಾಡಬೇಕು. ಇದಲ್ಲದೇ ಯೋಜನೆಗೆ ಬೇಕಾದ ಜಮೀನನ್ನು ಸ್ವಾಧೀನ ಪಡಿಸಿಕೊಳ್ಳುವ ಕಾರ್ಯವೂ ನಡೆಯಬೇಕು, ಇದರಲ್ಲಿ ಅರಣ್ಯ ಭೂಮಿ ಇರಬಹುದು, ಕಂದಾಯ ಭೂಮಿ ಇರಬಹುದು ಅಥವಾ ಖಾಸಗಿಯವರಿಂದ ಕೊಂಡುಕೊಳ್ಳತಕ್ಕಂಥ ಪ್ರದೇಶ ಇರಬಹುದು. ಇನ್ನು ಗುತ್ತಿಗೆಯನ್ನು ಪ್ರೀ-ಕ್ವಾಲಿಫೈಡ್ ಕಂಟ್ರಾ ಕ್ಟ್‌ರ್ಸ್‌ಗೇ ಕೂಡ ಬೇಕಾಗಿರುವುದರಿಂದ ಅಂಥವರನ್ನು ಹುಡುಕುವುದು ಇರುತ್ತದೆ. ಹೀಗಾಗಿ ಸ್ವಲ್ಪ ವಿಳಂಬವಾಗಿದೆ. ಎಲ್ಲಕ್ಕಿಂತ ಮುಖ್ಯವಾಗಿ ನಾವು ಈಗ ಹತ್ತು ಪುರಸಭೆಗಳನ್ನು ಕೈಗೆತ್ತಿಕೊಂಡಿದ್ದೇವೆ. ಈ ಮಧ್ಯೆ ಚುನಾವಣೆಗಳ ಹಂತದಲ್ಲಿದ್ದೆವು. ಚುನಾವಣೆಗಳು ಮುಗಿದ ಮೇಲೆ ಅವರ ಕನ್ಸ್‌ಲೆಟೇಶನ್ ಮಾಡಿ ಆ ಪ್ರಾಜೆಕ್ಟ್‌ಗಳನ್ನು ಕ್ಲಿಯರ್ ಮಾಡಬೇಕು ಎಂದು ಹೇಳಿ ಅದರಲ್ಲಿ ಕೆಲವು ತೊಡಕುಗಳು ಇದ್ದುದರಿಂದ ಸ್ವಲ್ಪ ನಿಧಾನವಾಗಿದೆ. ಅವನ್ನು ಸಾಧ್ಯವಾದಷ್ಟು ಬೇಗ ಈಗ ಕೈಗೆತ್ತಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆ ಉಡುಪಿ ಜಿಲ್ಲೆ ಹಾಗು ಉತ್ತರ ಕನ್ನಡ ಜಿಲ್ಲೆಗಳಲ್ಲಿ ವಿಶೇಷವಾಗಿ ಈ ಯೋಜನೆಯನ್ನು ಅನುಷ್ಠಾನಗೊಳಿಸುವುದಕ್ಕೆ ಎಲ್ಲಾ ಸಿದ್ಧತೆಗಳು ನಡೆದಿವೆ. ಮಾನ್ಯ ಘನ ಸರ್ಕಾರ ಒಪ್ಪಿಕೊಂಡಿರುವಂತೆ ಈಗಾಗಲೇ ವಿಳಂಬವಾಗುತ್ತಿದೆ. ಜನತೆಗೆ ಅನುಮಾನ ಬರುವಷ್ಟು ವಿಳಂಬವಾಗುತ್ತಿದೆ. ಏಕೆಂದರೆ ಎರಡು ವರ್ಷದ ಹಿಂದೆ ಮಾನ್ಯ ಮುಖ್ಯಮಂತ್ರಿಗಳು ಮಂಗಳೂರಿಗೆ ಹೋದಾಗ ಈ ಕಾರ್ಯಕ್ರಮದ ಉದ್ಘಾಟನೆಯನ್ನು ಮಾಡಿದ್ದರೂ ಕೂಡ ಕಳೆದ ಎರಡು ವರ್ಷಗಳಿಂದ ಏನು ಪ್ರಗತಿಯೇ ಕಾಣುತ್ತಿಲ್ಲ. ಮಧ್ಯದಲ್ಲಿ ಒಂದು ವರ್ಷದ ಹಿಂದೆ ಒಂದು ಸಭೆಯನ್ನು ಮಾಡಿದರಷ್ಟೆ. ಅದಾದ ನಂತರದಲ್ಲಿ ಇವರು ಯಾವ ಯಾವ ಪ್ಯಾಕೇಜ್ ಮಾಡಬೇಕೆಂದು ಯಾವ ಯಾವ ವಿನ್ಯಾಸ ಮಾಡಿಕೊಳ್ಳಬೇಕು ಎನ್ನುವುದರಲ್ಲಿಯೇ ಕಾಲ ವಿಳಂಬ ಆಗುತ್ತಿದೆ. ನಾವು ಹಣ ತೆಗೆದುಕೊಂಡಿರುವುದಕ್ಕೆ ಬಡ್ಡಿ ಕೊಡುವುದು ಕಡಿಮೆಯೇನೂ ಆಗುವುದಿಲ್ಲ. ಈ ಕಾರಣದಿಂದಾಗಿ ಜನರಿಗೆ ತೆರಿಗೆ ಹಾಕುವಂಥದ್ದು ಜಾಸ್ತಿಯಾಗುತ್ತದೆ. ಏಕೆಂದರೆ ಎರಡು ವರ್ಷದೊಳಗೆ ಯಾವ ಕೆಲಸ ಕಾರ್ಯಗಳನ್ನು ಮಾಡಿ ಮುಗಿಸಬಹುದಾಗಿತ್ತೋ ಆ ಹಣವನ್ನು ನಮ್ಮ ಕೊನೆಯ ವರ್ಷಗಳಲ್ಲಿ ನಾವು ಅದನ್ನು ಸೇವಿಂಗ್ಸ್ ಮಾಡಿ ಜನತೆಗೆ ತೆರಿಗೆ ಹಾಕುವುದನ್ನು ನಾವು ಕಡಿಮೆ ಮಾಡಬಹುದಿತ್ತು. ಆದರೆ ವಿಳಂಬ ಆಗುತ್ತಿರುವುದರಿಂದ ಜನತೆಗೆ ತೆರಿಗೆ ಹಾಕುವುದು ಜಾಸ್ತಿಯಾಗುತ್ತದೆ. ಏಕೆಂದರೆ ಬಡ್ಡಿಯನ್ನೇ ಜಾಸ್ತಿ ಕೊಡಬೇಕಾದ ಸಂದರ್ಭ ಇದೆ. ಆದುದರಿಂದ ಯಾವುದೇ ಕಾರಣಕ್ಕೂ ವಿಳಂಬ ಆಗದೇ ಇರುವ ರೀತಿಯಲ್ಲಿ ಸರ್ಕಾರ ಇದನ್ನು ತ್ವರಿತಗೊಳಿಸುವುದಕ್ಕೆ ಅಧಿಕಾರಿಗಳಿಗೆ ಕಟ್ಟಿಚ್ಚರಿಕೆಯನ್ನು ಕೊಟ್ಟು ಕೆಲಸವನ್ನು ಜಾರಿಗೊಳಿಸುವುದಕ್ಕೆ ಚಿಂತನೆಯನ್ನು ಸರ್ಕಾರ ಮಾಡಬೇಕು. ಇದು ಒಂದನೆಯದು. ಇನ್ನು ಎರಡನೆಯದಾಗಿ ಈ ಯೋಜನೆಯಲ್ಲಿಯೇ ಕೆಲವು ದೋಷಗಳಿವೆ.

ಇಲ್ಲಿ ವಿವೇಕಾನಂದ ವೈದ್ಯರು ಕೂಡ ಇದ್ದಾರೆ, ಶಿರಸಿಯಲ್ಲಿ ನಾವು ನೋಡುತ್ತೇವೆ, ಅಲ್ಲಿ ಅಂಡರ್‌ಗ್ರೌಂಡ್ ಪೈಪ್ ಹಾಕಿ ಸುಮಾರು 20 ವರ್ಷಗಳೇ ಆಯಿತು, ಇವೊತ್ತಿನವರೆಗೆ ಪೈಪ್‌ನೊಳಗೆ ಒಂದು ಹನಿ ನೀರೂ ಕೂಡ ಹೋಗಿಲ್ಲ. ಪೈಪ್ ಒಂದು ಮಾತ್ರ ರಸ್ತೆ ಒಳಗಡೆ ಇದೆ. ಇನ್ನೂ ಹತ್ತಿಪ್ಪತ್ತು ವರ್ಷಗಳು ಹಾಗೇ ಕಳೆದರೆ ಅದೂ ಒಂದು ಯಾವುದೋ ಐತಿಹಾಸಿಕ ಅವಶೇಷ ಎಂದು ಹೇಳಬಹುದು. ಅಂಥ ಪರಿಸ್ಥಿತಿ ಆಗಿದೆ. ಇಲ್ಲೂ ಕೂಡ ಈಗಲೂ ಈ ಯೋಜನೆಯಲ್ಲೂ ಅದೇ ರೀತಿಯಾದ ಕೆಲವು ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಸರ್ಕಾರ ಯೋಚಿಸುತ್ತಿದೆ. ಆದುದರಿಂದ ಸ್ಥಳೀಯ ಸಂಸ್ಥೆಗಳಲ್ಲಿರುವಂಥ ಜನ ಪ್ರತಿನಿಧಿಗಳ, ವಿವಿಧ ಸಂಘ ಸಂಸ್ಥೆಗಳ ಮತ್ತು ಸಾರ್ವಜನಿಕರ ಅಭಿಪ್ರಾಯಕ್ಕೆ ಸರ್ಕಾರ ಹೆಚ್ಚಿನ ಮನ್ನಣೆಯನ್ನು ಕೊಡಬೇಕು. ಈಗ ಅಲ್ಲಿಯ ಡಿ.ಸಿ.ಯವರು ಅಥವಾ ಆಡಳಿತಾಧಿಕಾರಿಗಳು ಚರ್ಚೆ ಮಾಡಿ ಅವರು ಏನು ಮಾಡಬೇಕು ಎಂದು ಇದದಾರೋ ಅದನ್ನೇ ಅವರು ನಮಗೆ ಮನದಟ್ಟು ಮಾಡುವ ಪ್ರಯತ್ನವನ್ನು ಮಾಡುತ್ತಾರಷ್ಟೆ. ದಯವಿಟ್ಟು ಹಾಗೆ ಮಾಡದೇ ಜನತೆಗೆ ಏನು ಬೇಕು ಅದನ್ನು ಮಾಡುವ ಬಗ್ಗೆ ಹೆಚ್ಚಿನ ಆದ್ಯತೆ ಕೊಡುವಲ್ಲಿ ಸಾರ್ವಜನಿಕರ ವಿಶ್ವಾಸವನ್ನು ಮತ್ತಷ್ಟು ಗಳಿಸಿಕೊಳ್ಳುವ ಪ್ರಯತ್ನ ಆಗಬೇಕು.

ಶ್ರೀ ಎನ್. ಯೋಗೀಶ್‌ಭಟ್: ಮಾನ್ಯ ಅಧ್ಯಕ್ಷರೆ, ಎ.ಡಿ.ಬಿ. ಪ್ರಮುಖ ಅನುಷ್ಠಾನಾಧಿಕಾರಿಗಳನ್ನು ಕೇವಲ ಎರಡು ವರ್ಷದಲ್ಲಿ ಮೂರು ಜನರನ್ನು ಬದಲಾವಣೆ ಮಾಡಲಾಗಿದೆ. ಒಂದು ನಿರ್ಣಯದ ಹಂತಕ್ಕೆ ಬರುವ ಸಂದರ್ಭದಲ್ಲಿ ಅವರನ್ನು ಬದಲಾಯಿಸುವಂಥ ಪ್ರಕ್ರಿಯೆಯಿಂದಾಗಿ ವಿಳಂಬವಾಗಿದೆಯೋ ಎನ್ನುವ ಪ್ರಶ್ನೆ ನನ್ನದಿದೆ. ಏಕೆಂದರೆ 13 1/2 ಪರ್ಸೆಂಟ್ ಬಡ್ಡಿಯನ್ನು ಕಟ್ಟಬೇಕಾದ ಸ್ಥಿತಿ ನಮಗೆ ಇದೆ ಆದುದರಿಂದ ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತಾರೆ ಎನ್ನುವ ಬಗ್ಗೆ ಹೇಳಬೇಕು.

ಶ್ರೀ ಡಿ.ಬಿ. ಚಂದ್ರೇಗೌಡ: ಮಾನ್ಯ ಅಧ್ಯಕ್ಷರೆ, ಇದು ಅಂತರಾಷ್ಟ್ರೀಯ ವ್ಯವಹಾರ. ಎ.ಡಿ.ಬಿ. ಯವರು ಸಾಲವನ್ನು ಕೊಡುತ್ತಾರೆ. ಸಾಲ ಕೊಡುವವರು ಸುಮ್ಮನೆ ಕೊಡುವುದಿಲ್ಲ. ಆದರೆ ಸಾಲ ತೆಗೆದುಕೊಳ್ಳುವ ನಾವೂ ಕೂಡ ಸುಮ್ಮನೇ ತೆಗೆದುಕೊಳ್ಳುವುದಿಲ್ಲ. ಎಲ್ಲದರಲ್ಲೂ ಪಾರದರ್ಶಕತೆಯಿಂದ ಮತ್ತು ಸೂಕ್ಷ್ಮವಾಗಿ ಪರಿಶೀಲನೆ ಮಾಡಿಯೇ ಕೆಲಸವನ್ನು ತೆಗೆದುಕೊಳ್ಳುತ್ತೇವೆ. ಸುಮಾರು 1100 ಕೋಟಿ ರೂಪಾಯಿಗಳನ್ನು ನಾವು ಈಗ ಖರ್ಚು ಮಾಡಬೇಕಾಗಿದೆ. ಅದರಲ್ಲಿ 38 ಕೋಟಿ ರೂಪಾಯಿಗಳು ಭಟ್ಕಳಕ್ಕೂ ಬರುತ್ತದೆ. ಈಗಾಗಲೇ ಸುಮಾರು 87 ಪ್ಯಾಕೇಜ್‌ಗಳ ಬಗ್ಗೆ ನಾವು ಆಲೋಚನೆ ಮಾಡಿದ್ದೇವೆ. ಅದರಲ್ಲಿ ಒಟ್ಟು 14 ಪ್ಯಾಕೇಜ್‌ಗಳು ಕ್ಲಿಯರ್ ಆಗಿದ್ದು, ಭಟ್ಕಳದ್ದು ಕೂಡ 4 ಪ್ಯಾಕೇಜ್‌ಗಳು ಕ್ಲಿಯರ್ ಆಗಿದೆ. ಅಧಿಕಾರಿಗಳ ಬದಲಾವಣೆಯಿಂದ ಏನೂ ತೊಂದರೆಯಾಗಿಲ್ಲ. ಈ ಪ್ಯಾಕೇಜ್‌ಗಳನ್ನು ಏಕೆ ಮಾಡಿದ್ದೇವೆಂದರೆ 25 ಕೋಟಿ ರೂಪಾಯಿಗಳಿಗೆ ಒಂದು ಪ್ಯಾಕೇಜ್ ಕ್ಲಿಯರ್ ಆದರೆ ದೆಹಲಿಯಲ್ಲಿಯೇ ಮಾಡಿಸಿಬಿಡಬಹುದು. ಅದಕ್ಕಿಂತ ಹೆಚ್ಚಾದರೆ ಅದು ಮತ್ತೆ ಅಂತರರಾಷ್ಟ್ರೀಯವಾಗಿ ಚರ್ಚೆಗೆ ಹೋಗುತ್ತದೆ. ಅದಕ್ಕಾಗಿ ಪ್ಯಾಕೇಜ್‌ಗಳನ್ನು ಮಾಡಿ ಸಾಧ್ಯವಾದಷ್ಟು ಶೀಘ್ರಗತಿಯಿಂದ ಇದನ್ನು ಪೂರೈಸಬೇಕು ಎನ್ನತಕ್ಕಂಥದ್ದು ಇದೆ. ಆದರೆ ತೊಂದರೆಗಳು ಏನಾಗಿದೆ, ಅದರ ಬಗ್ಗೆ

ತಾವೇನು ಸಲಹೆ ಮಾಡಿದ್ದೀರಿ, ಅದನ್ನು ನಾನೇ ಖುದ್ದಾಗಿ ಈ ಅಧಿವೇಶನ ಮುಗಿದ ಮೇಲೆ ನಿಮ್ಮೆಲ್ಲರಿಗೂ ತಿಳಿಸಿ ಅಲ್ಲಿರತಕ್ಕಂಥ ಪರಿಸ್ಥಿತಿಯನ್ನು ಪರಿಶೀಲನೆ ಮಾಡೋಣವೆಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತಾ, ಬಾಕಿ ತಾವೇನು ಇಂಟರ್‌ನೆಟ್ ಬಗ್ಗೆ ಹೇಳಿದಿರಿ ಅವೆಲ್ಲವೂ ಚರ್ಚೆಗೆ ಒಳಪಡಬೇಕಾಗುತ್ತದೆ. ಸಾರ್ವಜನಿಕರ ಅಭಿಪ್ರಾಯವನ್ನು ಪಡೆದುಕೊಂಡು ಮಾಡುವಂತಾದ್ದೇ ಒಟ್ಟಾರೆ ಈ ಎ.ಡಿ.ಬಿ.ಯಿಂದ ತಂದಿರತಕ್ಕಂಥ ಸಾಲದ ಮುಖ್ಯ ಉದ್ದೇಶ. ಸಾರ್ವಜನಿಕರು, ಚುನಾಯಿತ ಪ್ರತಿನಿಧಿಗಳು ಅರ್ಥಾತ್ ಶಾಸಕರು ಹಾಗೂ ಚುನಾಯಿತ ಪುರಸಭೆಗಳು, ಇವುಗಳಿಗೆ ನಾವು ಪ್ರಾಜೆಕ್ಟ್‌ಗಳನ್ನು ಕಳುಹಿಸಿ, ಅವರು ಏನು ಮಾಡಿಫೈ ಮಾಡುತ್ತಾರೆ ಅದನ್ನು ಒಪ್ಪಿಕೊಂಡು ಆ ರೀತಿಯಲ್ಲಿ ನಾವು ಪ್ರಾಜೆಕ್ಟ್ ಮಾಡುತ್ತೇವೆ. ಆದುದರಿಂದ ಇಲ್ಲಿ ಯಾವುದೇ ಸಂಶಯಕ್ಕೆ ಎಡೆ ಇಲ್ಲದ ಹಾಗೆ ಪ್ರಾಜೆಕ್ಟ್ ಮಾಡುವುದರಿಂದ ಸ್ವಲ್ಪ ವಿಳಂಬವಾಗಿದೆ. ಅದನ್ನು ನಾನು ಒಪ್ಪಿಕೊಂಡಿದ್ದೇನೆ. ಈ ಅಧಿವೇಶನ ಮುಗಿದ ತಕ್ಷಣ ನಿಮ್ಮ ಜೊತೆ ಸಮಾಲೋಚನೆ ಮಾಡಿ ವಿಷಯವನ್ನು ಸರಿಪಡಿಸುತ್ತೇನೆ.

ಅಧ್ಯಕ್ಷರು: ಅರಗ ಜ್ಞಾನೇಂದ್ರರವರೆ, ತಮ್ಮ ಪ್ರಶ್ನೆಗೆ ಇಪ್ಪತ್ತು ದಿವಸ ಸಮಯವನ್ನು ಸರ್ಕಾರದವರು ಕೇಳಿದ್ದಾರೆ. ಇನ್ನು ನಾವು ಒಂದು ತಿಂಗಳು ಅಧಿವೇಶನ ನಡೆಸುತ್ತೇವೆ.

ಶ್ರೀ ಅರಗ ಜ್ಞಾನೇಂದ್ರ: ಮಾನ್ಯ ಅಧ್ಯಕ್ಷರೆ, ನನಗೆ ಅರ್ಥ ಆಗುವುದಿಲ್ಲ. ಇದು 20 ದಿವಸ ಟೈಂ ಕೇಳುವಂತಹ ಪ್ರಶ್ನೆ ಏನೂ ಅಲ್ಲ. ಪ್ರಶ್ನೆ ತುಂಬಾ ಸುಲಭವಾಗಿದೆ. ವಿಧಾನಸಭೆಯ 224 ಸದಸ್ಯರು ಮತ್ತು ವಿಧಾನಪರಿಷತ್ತಿನ ಸದಸ್ಯರಿಗೆ ಎಷ್ಟು ಹಣ ಬಿಡುಗಡೆ ಆಗಿದೆ ಎಷ್ಟು ಖರ್ಚಾಗಿದೆ ಎಂದು ಹೇಳಬೇಕು. ನಾನು 15 ದಿವಸದ ಮೊದಲೇ ಪ್ರಶ್ನೆ ಕಳುಹಿಸಿದ್ದೇನೆ.

ಅಧ್ಯಕ್ಷರು: 224 ಕ್ಷೇತ್ರಗಳಿಂದಲೂ ಮಾಹಿತಿಯನ್ನು ಕುಹಿಸಿರುತ್ತಾರೆ. ಆದರೂ ಸ್ವಲ್ಪ ಸಮಯ ಕೇಳಿದ್ದಾರೆ. ಇನ್ನು ಸದನ ಒಂದು ತಿಂಗಳು ಕುಳಿತುಕೊಳ್ಳುವುದರಿಂದ ಮುಂದಿನವಾರ ತೆಗೆದುಕೊಳ್ಳೋಣ ಬಿಡಿ.

ತುರುವೇಕೆರೆಯಿಂದ ಬೆಂಗಳೂರಿಗೆ ನಿಲುಗಡೆ ರಹಿತ ಬಸ್ಸುಗಳನ್ನು ಓಡಿಸುವುದು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

5(25) - ಶ್ರೀ ಲಕ್ಷ್ಮೀನಾರಾಯಣ ಎಂ.ಡಿ. ತುರುವೇಕೆರೆ) ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುರುವೇಕೆರೆ ಡಿಪೋದಿಂದ ಬೆಂಗಳೂರಿಗೆ ಹೋಗುವ ಎಲ್ಲಾ ವೇಗಧೂತ ಬಸ್ಸುಗಳನ್ನು ಇತ್ತೀಚಿನ ದಿನಗಳಲ್ಲಿ ಎಲ್ಲಾ ಕಡೆ, ನಿಲುಗಡೆ ಮಾಡುತ್ತಿರುವುದು ನಿಜವೇ.

ಆ) ವೇಗದೂತ ಬಸ್ಸುಗಳಲ್ಲಿ ಪ್ರಯಾಣಿಕರಿಗೆ ಅನುಕೂಲ ಆಗುವ ಹಾಗೆ ಓಡಿಸದೇ ಯಡಿಯೂರಿನಿಂದ ಬೆಂಗಳೂರಿನವರೆಗೆ ಹತ್ತಾರು ಕಡೆ ನಿಲ್ಲಿಸಿ ಪ್ರಯಾಣಿಕರಿಗೆ ತೊಂದರೆ ಮಾಡುತ್ತಿರುವುದು ನಿಜವೇ.